

ಆ ನಗುವಿಗೆ ಅರ್ಥ ಹುಡುಕುವುದು ಅವಳಿಗೆ ಕಷ್ಟವೇನಿಲ್ಲ. ಹಾಗಂತ ಅವನನ್ನು ಪ್ರಶ್ನಿಸುವುದೂ ಇಲ್ಲ. ಪರಮ ಏನು ಎನ್ನುವುದು ಅವಳಿಗೆ ಸ್ಪಷ್ಟವಾಗಿರುವುದರಿಂದಲೇ ಅವಳು ಅವನ ಜೊತೆಗೆ ಇರುವೆನೆಂದು ಪರೋಕ್ಷವಾದ ಒಪ್ಪಂದವೊಂದಕ್ಕೆ ಮನದಲ್ಲಿಯೇ ಸಹಿ ಹಾಕಿಕೊಂಡವಳು.

ಅವಳು ಮನಸ್ಸು ಮಾಡುತ್ತಿದ್ದರೆ ಶ್ರೀಮಂತನೊಬ್ಬನ ತೆಕ್ಕೆಯಲ್ಲಿ ಸೇರಿ ಐಷಾರಾಮಿ ಜೀವನವನ್ನು ನಡೆಸಬಹುದಿತ್ತು. ಅಂತಹ ಸಂದರ್ಭವೊಂದು ಅವಳ ಬದುಕಿನಲ್ಲಿ ಎದುರಾದಾಗ ಪೊಲೀಸ್ ಠಾಣೆಯ ಮೆಟ್ಟಿಲು ಏರಿ ಮಂಜುವಿನ ವಿರುದ್ಧವೇ ದೂರು ದಾಖಲಿಸಿ ಬಂದಳು.

ಮಂಜು ಶ್ರೀಮಂತರಲ್ಲಿ ಶ್ರೀಮಂತನೇನಲ್ಲ. ಅವನಿಗೆ ಒಂದಷ್ಟು ಶ್ರೀಮಂತರ ಖಯಾಲಿಗಳು ಇದ್ದವು. ಹಾಗಾಗಿಯೇ ತಾನೊಬ್ಬ ಶ್ರೀಮಂತನೆನ್ನುವ ಸೋಗಿನಲ್ಲಿ ಬದುಕುತ್ತಿದ್ದವನು. ಅತಿಲೋಕ ಸುಂದರಿಯೊಬ್ಬಳು ಅವನ ಜೀವನ ಬಂಡಿಯ ಗಾಲಿಗೆ ಜೊತೆಯಾದ ಮೇಲೆ ಸಂಸಾರವನ್ನು ಸರಾಗವಾಗಿ ಸಾಗಿಸುತ್ತಿದ್ದ. ಎರಡು ಮುದ್ದಾದ ಮಕ್ಕಳು ಆ ಸಂಸಾರಕ್ಕೆ ಸಾಕ್ಷಿಯಾದಾಗ ಸೌಂದರ್ಯವತಿಯಾದ ಸುಗುಣಳಿಗೆ ಆಕರ್ಷಣೆ